ಶ್ರಿ ಬಸವರಾಜ್ ಎಸ್. ಹೊರಟ್ಟಿ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಣ್ಣ ಉಳಿತಾಯ ಸಚಿವರು)

ಅ) ಸರ್ಕಾರವು ಸದ್ಯಕ್ಕೆ ಈ ಯೋಜನೆ ಹೊಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

2322(2057) ಶ್ರೀ ಕುಮಾರಸ್ವಾಮಿ ಹೆಚ್. ಕೆ. (ಬೇಲೂರು):- ಮಾನ್ಯ ಮುಖ್ಯ ಮಂತ್ರಿಗಳು ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆ ಬೇಲೂರು ಪಟ್ಟಣಕ್ಕೆ 1999 ರಲ್ಲಿ ಅಗ್ನಿಶಾಮಕ ಠಾಣೆ ಮಂಜೂರಾಗಿರುವುದು ನಿಜವೇ;

ಆ) ಅಗ್ನಿಶಾಮಕ ಠಾಣೆಗೆ ನಿವೇಶನ ನೀಡಿರುವುದು ನಿಜವೇ;

ಇ) ಅಗ್ನಿಶಾಮಕ ಠಾಣೆ ಕಟ್ಟಡ ನಿರ್ಮಾಣಕ್ಕೆ ರೂ. 21.00 ಲಕ್ಷದ ಅಂದಾಜು ಪಟ್ಟಿ ತಯಾರಿಸಿರುವುದು ನಿಜವೇ;

ಈ) ಹಾಗಿದ್ದಲ್ಲಿ ಈವರೆವಿಗೂ ಸರ್ಕಾರ ಕಟ್ಟಡ ಮಂಜೂರಾತಿ ನೀಡಿ ಪ್ರಾರಂಭಿಸದಿರುಲು ಕಾರಣವೇನು;

ಉ) ತುರ್ತಾಗಿ ಕಟ್ಟಡ ನಿರ್ಮಾಣ ಮಾಡಿ ಅಗ್ನಿಶಾಮಕ ಠಾಣೆ ಪ್ರಾರಂಭಿಸಲಾಗುವುದೇ?

ಶ್ರಿ ಧರ್ಮಸಿಂಗ್ (ಮುಖ್ಯ ಮಂತ್ರಿಗಳು):-

ಅ) ಹಾಸನ ಜಿಲ್ಲೆ ಬೇಲೂರು ಪಟ್ಟಣದಲ್ಲಿ ಅಗ್ನಿಶಾಮಕ ಠಾಣೆಯನ್ನು ತೆರೆಯಲು ಸರ್ಕಾರವು ಆದೇಶ ಸಂಖ್ಯೆ: ಒಇ 163 ಅಸೇ 96 ದಿನಾಂಕ: 28-10-1997ರಲ್ಲಿ ಮಂಜೂರಾತಿ ನೀಡಿರುತ್ತದೆ.

ಆ) ಹೌದು, ಬೇಲೂರು ಪಟ್ಟಣದಲ್ಲಿ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲು ಹಾಸನ ಜಿಲ್ಲಾಧಿಕಾರಿಯವರು 3 ಎಕರೆ ನಿವೇಶನವನ್ನು ಮುಫತ್ತಾಗಿ ನೀಡಿರುತ್ತಾರೆ.

ಹೌದು, ಖಾಯಂ ಅಗ್ನಿಶಾಮಕ ಠಾಣೆ ಕಟ್ಟಡ ನಿರ್ಮಿಸಲು ಲೋಕೋಪಯೋಗಿ ಇಲಾಖೆಯವರು ರೂ. 21.00 ಲಕ್ಷಗಳ ಅಂದಾಜು ಪಟ್ಟಿಯನ್ನು ಸಲ್ಲಿಸಿರುತ್ತಾರೆ.

ಈ) ಖಾಯಂ ಅಗ್ನಿಶಾಮಕ ಠಾಣೆ ಕಟ್ಟಡ ನಿರ್ಮಿಸಲು ಸರ್ಕಾರವು ಮಂಜೂರಾತಿ ನೀಡಿದೆ. ಸದ್ಯದಲ್ಲೇ ಕಾಮಗಾರಿಯನ್ನು ಪ್ರಾರಂಭಿಸುವಂತೆ ಲೋಕೋಪಯೋಗಿ ಇಲಾಖೆಯವರನ್ನು ಕೋರಲಾಗುವುದು.

ಉ) ಖಾಯಂ ಅಗ್ನಿಶಾಮಕ ಠಾಣೆ ಕಟ್ಟಡ ನಿರ್ಮಾಣ ಮಾಡಿ ಅಗ್ನಿಶಾಮಕ ಇಲಾಖೆಯ ವಶಕ್ಕೆ ಪಡೆದ ನಂತರ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲಾಗುವುದು.

2323(2804) ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ):- ಮಾನ್ಯ ಮುಖ್ಯ ಮಂತ್ರಿಗಳು ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕದಲ್ಲಿ ಸೇವೆ ಮಾಡುತ್ತಿರುವ ಐ.ಎ.ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು;

ಆ) ಎಷ್ಟು ಜನ ಎರವಲು ಸೇವೆ ಮಾಡುತ್ತಿದ್ದಾರೆ (ಸರ್ಕಾರಿ ಸ್ವಾಮ್ಯದ ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳಲ್ಲಿ)

ಇ) ಈ ಬಗ್ಗೆ ಹಾರ್ನಳ್ಳಿ ರಾಮಸ್ವಾಮಿಯವರ ವರದಿಯನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಲಾಗುವುದೆ;

ಈ) ಇವರ ಸಂಖ್ಯೆಯನ್ನು ಕಡಿಮೆ ಮಾಡಲು ಸರ್ಕಾರ ಉದ್ದೇಶಿಸಿರುವ ಕ್ರಮಗಳೇನು?

ಶ್ರಿ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) 240

ಆ) ರಾಜ್ಯ ಸರ್ಕಾರಿ ಸ್ವಾಮ್ಯದಲ್ಲಿ 57
ರಾಜ್ಯ ಸರ್ಕಾರೇತರ ಸಂಘಸಂಸ್ಥೆಗಳಲ್ಲಿ 02
ಕೇಂದ್ರ ನಿಯೋಜನೆ 35
ಅಂತರ್ ರಾಜ್ಯ ನಿಯೋಜನೆ 02

ಇ) ಐಎಎಸ್ ಅಧಿಕಾರಿಗಳ ಸಂಖ್ಯೆಯನ್ನು ಕಡಿಮೆ ಮಾಡುವ ಬಗ್ಗೆ ವರದಿಯಲ್ಲಿ ಶಿಫಾರಸ್ಸು ಮಾಡಿರುವುದಿಲ್ಲ.

ಈ) ಈಗಾಗಲೇ ವಿಭಾಗಾಧಿಕಾರಿಗಳ ಹುದ್ದೆ, ನಿರ್ದೇಶಕರು, ಸರಕು ಖರೀದಿ ಇಲಾಖೆ ಮತ್ತು ನಿರ್ದೇಶಕರು (ಎ.ಡಿ.ಪಿ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಈ ಹುದ್ದೆಗಳನ್ನು ರದ್ದುಗೊಳಿಸಲಾಗಿದೆ.

2324(2809) ಶ್ರೀ ಮಾಧುಸ್ವಾಮಿ ಜೆ.ಸಿ. (ಚಿಕ್ಕನಾಯಕನಹಳ್ಳಿ):– ಮಾನ್ಯ ಮುಖ್ಯ ಮಂತ್ರಿಗಳು ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತಿಪಟೂರು ತಾಲ್ಲೂಕು ಕೆ.ಬಿ. ಕ್ರಾಸ್‌ನಲ್ಲಿ ವಿಪರೀತ ಜನಸಂದಣಿ ಹಾಗೂ ವಾಹನಗಳ ಓಡಾಟವಿದ್ದು ಅಲ್ಲಿ ಕಳ್ಳತನ ಕೊಲೆ ಹೆಚ್ಚಾಗಿರುವುದು ಸರ್ಕಾರದ ಗಮದಲ್ಲಿಯೇ?

ಆ) ಅಲ್ಲಿಗೆ ಬೇರೆ ಬೇರೆ ಠಾಣೆಗಳಿಂದ ಪೋಲೀಸ್ ಅಧಿಕಾರಿಗಳನ್ನು ನಿತ್ಯಕ್ಕೆ ಒಬ್ಬರಂತೆ ನಿಯೋಜನೆ ಮಾಡುತ್ತಿರುವುದು ನಿಜವೇ?

ಇ) ಹಾಗಿದ್ದಲ್ಲಿ ಹಿಂದೆಯೇ ಅಲ್ಲಿಗೆ ಪೋಲೀಸ್ ಠಾಣೆ ಮಂಜೂರಾಗಿದ್ದಾಗ್ಯೂ ಕೂಡ ಈವರೆಗೆ ಆರಂಭಿಸದಿರಲು ಕಾರಣವೇನು?

ಈ) ಈಗಾಲಾದರೂ ಆರಂಭಿಸಲಾಗುವುದೆ?

ಶ್ರಿ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಗಮನಕ್ಕೆ ಬಂದಿದೆ.

ಆ) ಇಲ್ಲ